# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 709 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 17.09.2021 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೆ ತರಲಾಯಿತು; ಈ ಯೋಜನೆಯ ರೂಪುರೇಷೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಯೋಜನೆಯನ್ನು 2015-16ನೇ ಸಾಲಿನಿಂದ ಜಾರಿಗೆ ತರಲಾಗಿದೆ. ಈ ಯೋಜನೆಯ ರೂಪುರೇಷಗಳಿಗೆ ಸಂಬಂಧಿಸಿದಂತೆ ಆದೇಶ ಪ್ರತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಈ ಯೋಜನೆಯು ಜಾರಿಯಾದಾಗಿನಿಂದ ಇದುವರೆವಿಗೂ ಸರ್ಕಾರ ಮೀಸಲಿಟ್ಟ ಅನುದಾನವೆಷ್ಟು; ಖರ್ಚು ಮಾಡಲಾದ ಅನುದಾನವೆಷ್ಟು: (ಸಂಪೂರ್ಣ ಮಾಹಿತಿ ನೀಡುವುದು) | (ಕೆಳಗಿನ ಕೋಷ್ಟಕ) |

| ಕ್ರ. ಸಂ | ವರ್ಷ | ಮೀಸಲಿಟ್ಟ ಅನುದಾನ | ಖರ್ಚು ಮಾಡಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2015-16 | 894.26 | 894.26 |
| 2 | 2016-17 | 767.75 | 767.75 |
| 3 | 2017-18 | 930.93 | 930.93 |
| 4 | 2018-19 | 431.62 | 431.62 |
| 5 | 2019-20 | 925.40 | 925.40 |
| 6 | 2020-21 | 499.00 | 499.00 |
| 7 | 2021-22 | 132.62 | 96.70 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಈ ಯೋಜನೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡಗಳೇನು; ಆಯ್ಕೆಯಾದ ಪ್ರತಿ ವಿದ್ಯಾರ್ಥಿಗೆ ನೀಡಿರುವ ಅನುದಾನದ ಮೊತ್ತವೆಷ್ಟು; | ಈ ಯೋಜನೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಅನುಸರಿಸಲಾಗುವ ಮಾನದಂಡಗಳು ಮತ್ತು ಆಯ್ಕೆಯಾದ ಪ್ರತಿ ವಿದ್ಯಾರ್ಥಿಗೆ ನೀಡುವ ಅನುದಾನಕ್ಕೆ ಸಂಬಂಧಪಟ್ಟಂತೆ ಆದೇಶ ಪ್ರತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ) | ಇತ್ತೀಚೆಗೆ 'ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರ ಸಾಕಷ್ಟು ಅನುದಾನ ಒದಗಿಸದೆ ಇರುವುದರಿಂದ ಮತ್ತು ಪ್ರತಿ ವಿದ್ಯಾರ್ಥಿಗೆ ನೀಡುವ ವೇತನದ ಮೊತ್ತವನ್ನು ಕಡಿತಗೊಳಿಸಿರುವುದರಿಂದ, ಹಿಂದುಳಿದ ವರ್ಗಕ್ಕೆ ಸೇರಿದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |

| | | |
|---|---|---|
| ಉ) | ಹಾಗಿದ್ದಲ್ಲಿ, ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಕೋವಿಡ್-19 ಸಾಂಕ್ರಮಿಕ ರೋಗದ ಹಿನ್ನೆಲೆಯಲ್ಲಿ ಅನುದಾನ ಕೊರತೆ ಇರುವುದರಿಂದ ಪ್ರಸಕ್ತ ಸಾಲಿಗೆ ಸದರಿ ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. |

ಸಂಖ್ಯೆ:ಹಿಂವಕ 522 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಅನುಬಂಧ–1

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2021–22ನೇ ಸಾಲಿಗೆ ರಾಜ್ಯವಲಯ ಲೆಕ್ಕಶೀರ್ಷಿಕೆ 2225–03–277–2–37ರಡಿ ಒದಗಿಸಿರುವ ಅನುದಾನ ಒಟ್ಟು ರೂ.2000.00 ಲಕ್ಷಗಳ ಅನುದಾನದಲ್ಲಿ, 2020–21ನೇ ಸಾಲಿನ ಬಾಕಿ ಹಾಗೂ ಮುಂದುವರೆದ ಕಾರ್ಯಕ್ರಮಗಳಡಿ ಇರುವ ನವೀಕರಣ ವಿದ್ಯಾರ್ಥಿಗಳ ವ್ಯಾಸಂಗ ವೇತನ, ತರಬೇತಿ ಭತ್ಯೆ, ತರಬೇತಿ ಶುಲ್ಕಗಳನ್ನು ಪಾವತಿಸಲು ಸಂಬಂಧಪಟ್ಟಂತೆ ವಿನಿಯೋಗಿಸಲು ಸಿದ್ಧಪಡಿಸಿರುವ ಕ್ರಿಯಾ ಯೋಜನೆ (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮಗಳು /ಯೋಜನೆಗಳಿಗೆ ಅವಶ್ಯವಿರುವ ಅನುದಾನ | ವಿವರ | 117 | 015 | 324 | 059 | ಒಟ್ಟು |
|---|---|---|---|---|---|---|---|
| 1 | ಪಿ.ಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್. | 1) 2020–21ರ 750 ನವೀಕರಣ ವಿದ್ಯಾರ್ಥಿಗಳಿಗೆ ಫೆಬ್ರುವರಿ 2021ರವರೆಗೆ ವ್ಯಾಸಂಗ ವೇತನ ಪಾವತಿಸಲು ಬೇಕಾಗುವ ಅನುದಾನ (ಏಪ್ರಿಲ್ 2020 ರಿಂದ ಅಕ್ಟೋಬರ್ 2020 ರವರೆಗಿನ 7 ತಿಂಗಳುಗಳ ಅವಧಿಯನ್ನು ಪರಿಗಣಿಸದಿದ್ದಲ್ಲಿ) | 414.00 | 0 | 0 | 0 | 414.00 |
| | | 2) 510 ನವೀಕರಣ ವಿದ್ಯಾರ್ಥಿಗಳಿಗೆ ಮಾರ್ಚ್ 2021 ರಿಂದ ಫೆಬ್ರುವರಿ 2022ರವರೆಗೆ ವ್ಯಾಸಂಗ ವೇತನ ಪಾವತಿಸಲು ಬೇಕಾಗುವ ಅನುದಾನ | 383.10 | 0 | 0 | 0 | 383.10 |
| 2 | ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ. | 1) 2020–21 ರ 4 ನವೀಕರಣ ವಿದ್ಯಾರ್ಥಿಗಳ ಬಾಕಿ ವ್ಯಾಸಂಗ ವೇತನ ಪಾವತಿಸಲು ಬೇಕಾಗುವ ಅನುದಾನ | 25.49 | 0 | 0 | 0 | 25.49 |
| | | 2) 2019–20ನೇ ಸಾಲಿನಲ್ಲಿ ವಿದೇಶಿ ವ್ಯಾಸಂಗ ವೇತನಕ್ಕೆ ಆಯ್ಕೆಯಾಗಿದ್ದು, ಸರ್ಕಾರದಿಂದ ಅನುಮತಿ ನೀಡಿರುವ ನಾಲ್ಕು ವಿದ್ಯಾರ್ಥಿಗಳಿಗೆ ಒಟ್ಟು ಎರಡು ವರ್ಷಗಳಿಗೆ ಪಾವತಿಸಲು ಬಾಕಿ ಇರುವ ಅನುದಾನ | 80.00 | 0 | 0 | 0 | 80.00 |
| | | 3) 2021–22 ರ 4 ನವೀಕರಣ ವಿದ್ಯಾರ್ಥಿಗಳಿಗೆ(ಪಿಹೆಚ್.ಡಿ) ವ್ಯಾಸಂಗ ವೇತನ ಪಾವತಿಸಲು ಬೇಕಾಗುವ ಅನುದಾನ | 32.00 | 0 | 0 | 0 | 32.00 |
| 3 | ಯುಪಿಎಸ್‌ಸಿ ಪರೀಕ್ಷಾ ಪೂರ್ವ ತರಬೇತಿ | 2019–20ನೇ ಸಾಲಿಗೆ ಯುಪಿಎಸ್‌ಸಿ ಪರೀಕ್ಷಾ ಪೂರ್ವ ತರಬೇತಿಯ ಅಭ್ಯರ್ಥಿಗಳಿಗೆ ತರಬೇತಿ ಭತ್ಯೆ ಮತ್ತು ಸಂಸ್ಥೆಗಳಿಗೆ ತರಬೇತಿ ಶುಲ್ಕ ಪಾವತಿಸಲು ಬೇಕಾಗುವ ಅನುದಾನ | 0 | 25.30 | 0 | 382.50 | 407.80 |
| 4 | ಬ್ಯಾಂಕ್ ಪಿ.ಒ ಪರೀಕ್ಷಾ ಪೂರ್ವ ತರಬೇತಿ | 2019–20ನೇ ಸಾಲಿಗೆ ಬ್ಯಾಂಕ್ ಪಿ.ಒ ಪರೀಕ್ಷಾ ಪೂರ್ವ ತರಬೇತಿ ನೀಡಿದ ಸಂಸ್ಥೆಗಳಿಗೆ ತರಬೇತಿ ಶುಲ್ಕ ಪಾವತಿಗೆ ಬೇಕಾಗುವ ಅನುದಾನ | 0 | 0 | 0 | 25.03 | 25.03 |
| 5 | ಗೇಟ್ ಪರೀಕ್ಷಾ ಪೂರ್ವ ತರಬೇತಿ | 2019–20ನೇ ಸಾಲಿಗೆ ಗೇಟ್ ಪರೀಕ್ಷಾ ಪೂರ್ವ ತರಬೇತಿ ನೀಡಿದ ಸಂಸ್ಥೆಗ ತರಬೇತಿ ಶುಲ್ಕ ಪಾವತಿಗೆ ಬೇಕಾಗುವ ಅನುದಾನ | 0 | 0 | 0 | 12.18 | 12.18 |
| 6 | ಸವಿತಾ ಸಮಾಜದ ಪಾರಂಪರಿಕ ಕಲೆಗಳಾದ ನಾಗಸ್ವರ ಮತ್ತು ಡೋಲು ಸಂಗೀತ ಕಲೆಗಳ ಪುನಶ್ಚೇತನ ಕಾರ್ಯಕ್ರಮ. | ವಸತಿ ನಿಲಯದ ನಿರ್ವಹಣಾ ವೆಚ್ಚ, ವಿದ್ಯಾರ್ಥಿಗಳಿಗೆ ತರಬೇತಿ ಭತ್ಯೆ & ಶಿಕ್ಷಕರ ಗೌರವಧನಕ್ಕಾಗಿ ಬೇಕಾಗುವ ಅನುದಾನ | 0 | 2.50 | 17.00 | 26.50 | 46.00 |
| 7 | JEE, NEET ಪರೀಕ್ಷಾ ಪೂರ್ವ ತರಬೇತಿ. | 2020–21ನೇ ಸಾಲಿನ JEE 148 & NEET 170 ಒಟ್ಟು 318 ನವೀಕರಣ ವಿದ್ಯಾರ್ಥಿಗಳ ತರಬೇತಿ ಶುಲ್ಕ ಪಾವತಿಗೆ ಬೇಕಾಗುವ ಅನುದಾನ(ತಲಾ ಅಭ್ಯರ್ಥಿಗೆ ರೂ.75000/– ಶುಲ್ಕ ಇದ್ದು, ಇದರಲ್ಲಿ ಶೇ.25 ಅನ್ನು 2020–21ರಲ್ಲಿ ಪಾವತಿಸಿದ್ದು, ಬಾಕಿ ಶೇ.62.5 [ತಲಾ ರೂ.56,250ರಂತೆ] ರಷ್ಟನ್ನು ಪಾವತಿಸಬೇಕಾಗಿದೆ.) | 0 | 0 | 0 | 178.87 | 178.87 |

2021-22ನೇ ಸಾಲಿಗೆ ರಾಜ್ಯವಲಯ ಲೆಕ್ಕಶೀರ್ಷಿಕೆ 2225-03-277-2-37ರಡಿ ಒದಗಿಸಿರುವ ಅನುದಾನ ಒಟ್ಟು ರೂ.2000.00 ಲಕ್ಷಗಳ ಅನುದಾನದಲ್ಲಿ, 2020-21ನೇ ಸಾಲಿನ ಬಾಕಿ ಹಾಗೂ ಮುಂದುವರೆದ ಕಾರ್ಯಕ್ರಮಗಳಡಿ ಇರುವ ನವೀಕರಣ ವಿದ್ಯಾರ್ಥಿಗಳ ವ್ಯಾಸಂಗ ವೇತನ, ತರಬೇತಿ ಭತ್ಯೆ, ತರಬೇತಿ ಶುಲ್ಕಗಳನ್ನು ಪಾವತಿಸಲು ಸಂಬಂಧಪಟ್ಟಂತೆ ವಿನಿಯೋಗಿಸಲು ಸಿದ್ಧಪಡಿಸಿರುವ ಕ್ರಿಯಾ ಯೋಜನೆ (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮಗಳು /ಯೋಜನೆಗಳಿಗೆ ಅವಶ್ಯವಿರುವ ಅನುದಾನ | ವಿವರ | 117 | 015 | 324 | 059 | ಒಟ್ಟು |
|---|---|---|---|---|---|---|---|
| 8 | ಇಬ್ಬರು ಪ್ರೋಗ್ರಾಮರ್‌ಗಳ ವೇತನ | ಹೊರ ಸಂಪನ್ಮೂಲ ಆಧಾರದಲ್ಲಿ ಆಯುಕ್ತಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಪ್ರೋಗ್ರಾಮರ್‌ಗಳ ವೇತನಕ್ಕಾಗಿ (ಮಾಹೆಯಾನ ರೂ.115000/- ದಂತೆ) | 0 | 0 | 0 | 13.80 | 13.30 |
| 9 | ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ - 2020-21ನೇ ಸಾಲಿಗೆ ಸಂಬಂಧಪಟ್ಟಂತೆ ನರ್ಸಿಂಗ್ ವಿದ್ಯಾರ್ಥಿಗಳಿಂದ ಎಸ್.ಎಸ್.ಪಿ ಪೋರ್ಟಲ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ. | ಅ) 2000 ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಪಾವತಿಸಲು (ತಲಾ ವಿದ್ಯಾರ್ಥಿಗೆ ಬೋಧನಾ ಶುಲ್ಕ ರೂ.5000/- ದಂತೆ) | 100.00 | 0 | 0 | 0 | 100.00 |
| | | ಆ) 3000 ಜಿ.ಎನ್.ಎಂ. ನರ್ಸಿಂಗ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಪಾವತಿಸಲು (ತಲಾ ವಿದ್ಯಾರ್ಥಿಗೆ ಬೋಧನಾ ಶುಲ್ಕ ರೂ.4500/- ದಂತೆ) | 135.00 | 0 | 0 | 0 | 135.00 |
| 10 | ಇತರ ವೆಚ್ಚ | | | | | | |
| 11 | ಅ) | ಅಬ್ಜೆಕ್ಟಿವ್ ಕೋಡ್‌ವಾರು ಅವಶ್ಯವಿರುವ ಅನುದಾನ | 0 | 0 | 0 | 8.63 | 8.63 |
| | ಆ) | 2021-22ರ ಆಯವ್ಯಯದಲ್ಲಿ ಅಬ್ಜೆಕ್ಟಿವ್ ಕೋಡ್‌ವಾರು ಒದಗಿಸಿರುವ ಅನುದಾನ | 1169.59 | 27.80 | 17.00 | 647.51 | 1861.90 |
| | ಇ) | ಅಬ್ಜೆಕ್ಟಿವ್ ಕೋಡ್‌ವಾರು ಕೊರತೆ ಇರುವ ಮತ್ತು ಹೆಚ್ಚುವರಿಯಾಗಿರುವ ಅನುದಾನ | 720.00 | 508.00 | 17.00 | 755.00 | 2000.00 |
| | ಈ) | ಮೇಲೆ 11(ಇ) ನಲ್ಲಿ ವಿವರಿಸಿರುವಂತೆ ಅಬ್ಜೆಕ್ಟಿವ್ ಕೋಡ್ 015 ರಡಿ ಉಳಿಕೆಯಾಗುವ ರೂ.480.20 ಲಕ್ಷಗಳಲ್ಲಿ ರೂ.449.59 ಲಕ್ಷಗಳನ್ನು ಅಬ್ಜೆಕ್ಟಿವ್ ಕೋಡ್ 117 ಗೆ ಮರುವಿನಿಯೋಗ ಮಾಡಿಕೊಡಲು ಸರ್ಕಾರವನ್ನು ಕೋರಬಹುದಾಗಿದೆ. | -449.59 | 480.20 | 0.00 | 107.49 | 138.10 |
| | ಉ) | ಮರುವಿನಿಯೋಗದ ನಂತರ ಅಬ್ಜೆಕ್ಟಿವ್ ಕೋಡ್ 015 ರಡಿ ರೂ.30.61 ಹಾಗೂ ಅಬ್ಜೆಕ್ಟಿವ್ ಕೋಡ್ 059 ರಡಿ ರೂ.107.49 ಸೇರಿ ಒಟ್ಟು ರೂ.138.10 ಲಕ್ಷಗಳು ಉಳಿಕೆಯಾಗುತ್ತದೆ. | | | | | |

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ಅನುಬಂಧ-2

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

2021–22ನೇ ಸಾಲಿಗೆ ರಾಜ್ಯವಲಯ ಲೆಕ್ಕಶೀರ್ಷಿಕೆ 2225–03–277–2–37ರಡಿ ವಿವಿಧ ಮುಂದುವರೆದ ಅಗತ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹೆಚ್ಚುವರಿಯಾಗಿ ಅಗತ್ಯವಿರುವ ಅಂದಾಜು ಅನುದಾನದ ವಿವರ (ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾರ್ಯಕ್ರಮದ ಹೆಸರು | ಭೌತಿಕ ಗುರಿ | ಬೇಕಾಗುವ ಅಂದಾಜು ಅನುದಾನ (ರೂ.ಲಕ್ಷಗಳಲ್ಲಿ) | | | | |
|---|---|---|---|---|---|---|---|
| | | | ಅಬ್ಜೆಕ್ಟಿವ್ ಕೋಡ್ | | | | ಒಟ್ಟು |
| | | | 117 | 015 | 324 | 059 | |
| 1 | ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ – 2021–22ನೇ ಸಾಲಿಗೆ ಸಂಬಂಧಪಟ್ಟಂತೆ ನರ್ಸಿಂಗ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ, ಸಮವಸ್ತ್ರ ವೆಚ್ಚ, ಪುಸ್ತಕಗಳ ವೆಚ್ಚ, ಮಾಸಿಕ ಶಿಷ್ಯವೇತನ, ಸೈಕ್ಯಾಟ್ರಿಕಲ್ ಕ್ಲಿನಿಕಲ್ ವೆಚ್ಚ ಪಾವತಿಸಲು | | | | | | |
| | ಅ) ಬಿಎಸ್ಸಿ ನರ್ಸಿಂಗ್ (ತಲಾ ವಿದ್ಯಾರ್ಥಿಗೆ ಬೋಧನಾ ಶುಲ್ಕ ರೂ.24750/– ರಂತೆ) | 2000 | 495.00 | 0 | 0 | 0 | 495.00 |
| | ಆ) ಜಿ.ಎನ್.ಎಂ. ನರ್ಸಿಂಗ್ (ತಲಾ ವಿದ್ಯಾರ್ಥಿಗೆ ಬೋಧನಾ ಶುಲ್ಕ ರೂ.24000/– ದಂತೆ) | 3000 | 720.00 | 0 | 0 | 0 | 720.00 |
| 2 | ಯು.ಪಿ.ಎಸ್.ಸಿ ಪರೀಕ್ಷಾ ಪೂರ್ವ ತರಬೇತಿ | 500 | 0 | 190.00 | 0 | 552.50 | 742.50 |
| 3 | ಕೆ.ಪಿ.ಎಸ್.ಸಿ ಪರೀಕ್ಷಾ ಪೂರ್ವ ತರಬೇತಿ | 500 | 0 | 125.00 | 0 | 375.00 | 500.00 |
| 4 | ಬ್ಯಾಂಕಿಂಗ್ ಪಿ.ಒ ಪರೀಕ್ಷಾ ಪೂರ್ವ ತರಬೇತಿ | 500 | 0 | 50.00 | 0 | 100.00 | 150.00 |
| 5 | ಜೆ.ಇ.ಇ ಮತ್ತು ನೀಟ್ ಪರೀಕ್ಷಾ ಪೂರ್ವ ತರಬೇತಿ–2021–22ನೇ ಸಾಲಿನಲ್ಲಿ ಪ್ರಥಮ ವರ್ಷದ ಹೊಸ ವಿದ್ಯಾರ್ಥಿಗಳ ಶೇ.50 ರಷ್ಟು ತರಬೇತಿ ಶುಲ್ಕ ಪಾವತಿಗಾಗಿ (ತಲಾ ಅಭ್ಯರ್ಥಿಗೆ ಪ್ರಥಮ ಮತ್ತು ದ್ವಿತೀಯ ವರ್ಷಕ್ಕೆ ಸೇರಿ ಒಟ್ಟು ಅಂದಾಜು ತರಬೇತಿ ಶುಲ್ಕ ರೂ.75,000/– ಆಗಿದ್ದು, ಪ್ರಥಮ ವರ್ಷಕ್ಕೆ ರೂ.37,500/– ರಂತೆ ತರಬೇತಿ ಶುಲ್ಕ) | 350 | 0 | 0 | 0 | 131.25 | 131.25 |
| 6 | ಗೇಟ್, ಜಿಮ್ಯಾಟ್, ಜಿಆರ್‌ಇ ಪರೀಕ್ಷಾ ಪೂರ್ವ ತರಬೇತಿ–(ತಲಾ ಅಭ್ಯರ್ಥಿಗೆ ತರಬೇತಿ ಶುಲ್ಕ ರೂ.30,000/– ದಂತೆ) | 150 | 0 | 0 | 0 | 45.00 | 45.00 |
| 7 | ಪ್ರಥಮ ವರ್ಷದ ಹೊಸ ಪಿಹೆಚ್.ಡಿ ವಿದ್ಯಾರ್ಥಿಗಳಿಗೆ 2021–22ನೇ ಸಾಲಿನಲ್ಲಿ ಅಂದಾಜು 5 ಮಾಹೆಗಳಿಗೆ ವ್ಯಾಸಂಗ ವೇತನ ಪಾವತಿಸಲು | 250 | 125.00 | 0 | 0 | 0 | 125.00 |
| 8 | IIT/IIM/IISc ಮುಂತಾದ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 2021–22ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದು ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ (ತಲಾ ವಿದ್ಯಾರ್ಥಿಗೆ ರೂ.2.00 ಲಕ್ಷಗಳಂತೆ) | 100 | 200.00 | 0 | 0 | 0 | 200.00 |

| ಕ್ರ. ಸಂ | ಕಾರ್ಯಕ್ರಮದ ಹೆಸರು | ಭೌತಿಕ ಗುರಿ | ಬೇಕಾಗುವ ಅಂದಾಜು ಅನುದಾನ (ರೂ.ಲಕ್ಷಗಳಲ್ಲಿ) | | | | |
|---|---|---|---|---|---|---|---|
| | | | ಅಬ್ಜೆಕ್ಟಿವ್ ಕೋಡ್ | | | | ಒಟ್ಟು |
| | | | 117 | 015 | 324 | 059 | |
| 9 | ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ | 100 | 1000.00 | 0 | 0 | 0 | 1000.00 |
| 10 | ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್, ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿ ತಿಳುವಳಿಕೆ ಹೆಚ್ಚಿಸಲು ಮತ್ತು ವೃತ್ತಿ ಮಾರ್ಗದರ್ಶನ ನೀಡಲು ತಾಲ್ಲೂಕು ಮಟ್ಟದಲ್ಲಿ 3 ದಿನಗಳ ಕಾರ್ಯಕ್ರಮವನ್ನು ಆಯೋಜಿಸುವ ಕುರಿತು. | 10000 | 0 | 0 | 0 | 100.00 | 100.00 |
| 11 | ರಾಜ್ಯದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಸೇನೆಗೆ ಆಯ್ಕೆಯಾಗುವ ಅವಕಾಶಗಳನ್ನು ಹೆಚ್ಚಿಸಲು ಆಯ್ಕೆ ಪೂರ್ವ ತರಬೇತಿ-(ತಲಾ ಅಭ್ಯರ್ಥಿಗೆ ಅಂದಾಜು ರೂ.50000/- ಗಳ ತರಬೇತಿ ವೆಚ್ಚದಂತೆ). | 1000 | 0 | 0 | 0 | 500.00 | 500.00 |
| | ಒಟ್ಟು | 18450 | 2540.00 | 365.00 | 0.00 | 1803.75 | 4708.75 |
| 12 | ರಾಜ್ಯವಲಯ ಲೆಕ್ಕಶೀರ್ಷಿಕೆ 2225--03-277-2-37 ರಡಿ 2021-22ನೇ ಸಾಲಿಗೆ ನಿಗದಿಪಡಿಸಿರುವ ರೂ.2000.00 ಲಕ್ಷಗಳಲ್ಲಿ, 2020-21ನೇ ಸಾಲಿನ ಕಾರ್ಯಕ್ರಮಗಳು/ ಯೋಜನೆಗಳ ಬಾಕಿ ಪಾವತಿಸಲು ರೂ.1861.90 ಲಕ್ಷಗಳ ಅವಶ್ಯತೆ ಇದ್ದು, ಬಾಕಿ ಉಳಿಯುವ ಅನುದಾನ | | 0 | 30.61 | 0 | 107.49 | 138.10 |
| 13 | ಆದ್ದರಿಂದ ರಾಜ್ಯವಲಯ ಲೆಕ್ಕಶೀರ್ಷಿಕೆ 2225-03-277-2-37 ರಡಿ 2021-22ನೇ ಸಾಲಿಗೆ ನಿಗದಿಪಡಿಸಿರುವ ರೂ.2000.00 ಲಕ್ಷಗಳನ್ನು ಹೊರತುಪಡಿಸಿ, 2021-22ನೇ ಸಾಲಿನಲ್ಲಿ ವಿವಿಧ ಮುಂದುವರೆದ ಅಗತ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹೆಚ್ಚುವರಿಯಾಗಿ ಅಗತ್ಯವಿರುವ ಅನುದಾನ | | 2540.00 | 334.39 | 0.00 | 1696.26 | 4570.65 |

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 'ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ' ಸೌಲಭ್ಯ ನೀಡುವ ಕುರಿತು.

ಓದಲಾಗಿದೆ:
1. 2015-16ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯ ಕಂಡಿಕೆ ಸಂಖ್ಯೆ (221).
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಹಿಂವಕಇ/ತರಬೇತಿ/ಪ.ಮೂ.ತ/CR-2/2015-16, ದಿನಾಂಕ: 15.04.2015.

********

ಪ್ರಸ್ತಾವನೆ:

2015-16ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಆಯವ್ಯಯ ಭಾಷಣದ ಕಂಡಿಕೆ (221) ರಲ್ಲಿ ಈ ಕೆಳಗಿನಂತೆ ಘೋಷಿಸಲಾಗಿದೆ.

'ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಛಿಸುವ ಹಿಂದುಳಿದ ವರ್ಗಗಳ 100 ವಿದ್ಯಾರ್ಥಿಗಳಿಗೆ 10 ಲಕ್ಷ ರೂ. ಗಳಂತೆ "ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ" ನೀಡಲಾಗುವುದು. ಇದಕ್ಕಾಗಿ ಒಟ್ಟು 10 ಕೋಟಿ ರೂ. ಒದಗಿಸಲಾಗುವುದು.'

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪ್ರಸ್ತಾವನೆಯಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು, ಆಯವ್ಯಯ ಘೋಷಣೆಯನ್ವಯ 2015-16ನೇ ಸಾಲಿನಿಂದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗವನ್ನು ಪಡೆಯುವ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ.10.00 ಲಕ್ಷದಂತೆ ಗರಿಷ್ಠ 3 ವರ್ಷಗಳಿಗೆ ಒಟ್ಟು ರೂ.30.00 ಲಕ್ಷಗಳು ಮೀರದಂತೆ "ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ" ನೀಡಬೇಕಾಗಿದ್ದು, ಸದರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸರ್ಕಾರದ ಆದೇಶದೊಂದಿಗೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹಿಂವಕ 529 ಬಿಎಂಎಸ್ 2015, ದಿನಾಂಕ: 11.06.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2015-16ನೇ ಸಾಲಿನಿಂದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಛಿಸುವ ಹಿಂದುಳಿದ ವರ್ಗಗಳ 100 ವಿದ್ಯಾರ್ಥಿಗಳಿಗೆ "ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ" ವನ್ನು ಅನುಬಂಧದಲ್ಲಿನ ಮಾರ್ಗಸೂಚಿಗಳನ್ವಯ ಮಂಜೂರು ಮಾಡಲು ಅನುಮೋದನೆ ನೀಡಿ ಆದೇಶಿಸಿದೆ.

...1

ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ 2225-03-277-2-37 ರಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 529 ವೆಚ್ಚ-3/2015, ದಿನಾಂಕ:10.06.2015ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

-----

ANNEXTURE TO GOVERNMENT ORDER NO BCW 529 BMS 2015

DATED:11.06.2015

Guidelines for the scheme of "D. Devaraja Urs Videshi Vyasanga Vethana" for Backward Classes Candidates of Karnataka State.

I. THE SCHEME:

The scheme provides financial assistance to the eligible Backward Class candidates for pursuing Masters level courses and Ph.D/Research at abroad in the following specified field of study.

a. Engineering & Technology.
b. Management & Commerce.
c. Sciences & Technology.
d. Agriculture & Allied Sciences/Technology.
e. Medicine.
f. Humanities & Social Sciences.
g. Any other.

II. ELIGIBILITY:

1. Educational Qualification:
   a. For Ph.D/Research: Minimum 60% marks or equivalent grade in relevant Master's Degree.
   b. For Master's Degree: Minimum 60% marks or equivalent grade in relevant Bachelor's Degree.

2. Age Limit:

   Below 35 years, as on the last date fixed for submission of application for financial assistance. Date of birth as per SSLC marks card.

3. Income Ceiling:

   Total income from all sources of the candidate and his/her parents/guardians should not exceed Rs.6.00 lakhs per annum.

4. The Candidate shall be a citizen of India and permanent resident of Karnataka State.

5. One Child in a Family and One Time Assistance:

   Not more than one child of the same parents/guardians will be eligible and to this effect a self-certification will be required from the candidate. An individual can be given the financial assistance only once and cannot be considered for a second or subsequent time.

6. The candidates who are working under Central/State Government/Govt Aided Institutions/Public Undertakings are not eligible for financial assistance under this scheme.

...3

III. FINANCIAL ASSISTANCE:

Maximum Rs.10.00 lakhs or actual expenditure whichever is lesser will be sanctioned annually. This includes Course fee, Living Expenses, Contingency, Air fare etc.,

IV. DURATION OF FINANCIAL ASSISTANCE:

1. Ph.D/Research-Maximum 3 years or completion of the course whichever is earlier.
2. Masters Degree- Maximum 2 years or completion of the course whichever is earlier.

V. MODE OF PAYMENT:

1. The candidate shall submit copies of current Passport and VISA and confirmation letter of admission in foreign University/Institution to get 1st year's financial assistance.
2. 2nd and 3rd year's financial assistance will be sanctioned only after the submission of progress report of the candidate through concerned University/Institutions.
3. Yearly financial assistance will be sanctioned to the candidates in a single installment in beginning of the academic year.
4. If the final year of the course (within the duration of financial assistance) is less than 6 months, the candidate will be sanctioned 50% of the annual financial assistance.
5. The payment will be made through NEFT/RTGS to the Bank account of the candidate.

VI. SELECTION COMMITTEE:

The committee comprising of the following members will select the candidates & the decision of the selection committee shall be final.

| | | |
|---|---|---|
| 1 | Principal Secretary/Secretary, Backward Classes Welfare Department | Chairman |
| 2 | Senior professor, IIM, Bengaluru | Member |
| 3 | Senior professor, IISc, Bengaluru | Member |
| 4 | Senior professor, Agriculture University, Bengaluru | Member |
| 5 | Senior professor, National School of Law, Bengaluru | Member |
| 6 | Senior professor, VTU center, Bengaluru | Member |
| 7 | Senior professor, Rajiv Gandhi University of Health Sciences, Bengaluru | Member |
| 8 | Commissioner/Director Backward Classes Welfare Department | Member Secretary |

VII. SELECTION PROCEDURE:

1. The candidate shall submit on-line application in the prescribed format with required documents to the Commissioner, Backward Classes Welfare Department, Bengaluru.
2. Verification of the original documents will be done at the offiice of concerned District Backward Classes Welfare Officer.
3. Personal interview of the candidate will be conducted by the selection committee at Bengaluru.
4. The candidates will be selected on the basis of merit cum means & assessment of selection committee.
5. Categorywise Reservation is as follows.

| Sl. No. | Category | Percentage |
|---|---|---|
| 1 | 1 | 24% |
| 2 | 2A | 46% |
| 3 | 3A | 14% |
| 4 | 3B | 16% |
| | Total | 100% |

6. If there are no eligible candidates in any of the category, the seats will be distributed among other categories as per reservation.
7. Under Category-1 50% seates will be reserved for the candidates of Nomadic/Semi Nomadic Tribes. If there are no eligible NT/SNT candidates seats will be filled up by other candidates of Category-1.
8. In each Category 33% will be reserved for women candidates, 5% for rural candidates & 3% for physically challenged candidates.
9. If there are no eligible Women candidates in a particular categoty seats will be filled up by the male candidates of the same categoty.
10. If there are no eligible Rural/Physically challenged candidates seats will be filled up by the other candidates of the same categoty.

VIII. OTHER MANDATORY CONDITIONS:

1. The candidates are required to make their own efforts in seeking admission in accredited foreign University/Institutions to the courses specified in the scheme.

2. It will be for the candidate to obtain the appropriate Visa for a country wherein he/she intends to study further under the scheme.

3. The selected candidates shall obtain admission and join foreign University/Institution -

- On or before the last date fixed by the foreign University/Institution.
- Within the financial year of selection i.e., from April to March.
- In case the University/Institution extends the joining date beyond the financial year of selection, candidates are allowed to join.
- On expiry of this specified period of time, selection for financial assistance will automatically get cancelled. No request for extension of time is permissible under the scheme.

4. The selected candidates may pursue their respective studies in an accredited University/Institution in country of their choice with which India has diplomatic relations, subject to prior approval of the Government of India/Government of Karnataka whose decision will be final and not challengeable.

5. The selected candidates shall execute a bond in prescribed format for abiding the conditions of the scheme.

6. A surety (either land holder or Government employee) for each selected candidate shall execute surety bond separately for the actual amount to be sanctioned by the Backward Classes Welfare Department, Bengaluru.

7. The candidates shall not change the course of study or research for which financial assistance has been sanctioned.

8. In case the candidate has received over payment from Backward Classes Welfare Department, he/she shall refund the same to Government of Karnataka.

9. Yearly progress report of the candidates from concerned University/Institution is required to sanction financial assistance for renewals.

10. Only in following special cases the Backward Classes Welfare Department is authorised to allow the candidate to change the University/Institutions after making such correspondence and satisfied about such a need for change.
    - If the candidate finds himself/herself in a serious situation where his/her Guide has left and there are no immediate replacements thereof.
    - If the University/Institution has discontinued the research support facilities in the area where the candidate was pursuing Ph.D/Research.
    - But the total period of financial assistance will remain unchanged even on transfer/change can be considered only in rare cases.

...6

11. After completion of higher studies the candidate shall submit course completion certificate issued by the concerned University/Institution to the Commissioner, Backward Classes Welfare Departmnet, Bengaluru.

12. The candidate shall inform the Commissioner, Backward Classes Welfare Departmnet, Bengaluru, regarding placement after completion of studies.

IX. DEFAULT UNDER THE SCHEME:-

1. In following situations, the candidate shall be declared as a defaulter and shall be liable to refund the entire amount paid to him/her along with interest at 15% per annum or such rate as may be fixed from time to time by Government of Karnataka.
    - If he/she violates any of the terms and conditions of the bonds executed by him/her.
    - If the educational University/Institution intimates the Indian Mission/Embessy abroad/Government of Karnataka about his/her adverse reports on studies and/or conduct.
    - If the candidates join any other University or Course/Programme during the period of financial assistance.
    - If the candidate absconds/discontinues the study.
    - If the candidate does not submit yearly academic progress report.
2. In case the defaulter fails to repay the amount within six months from the date on which a demand for such refund is made, penal interest at the rate which is 2.5% higher than the aforesaid rate of interest on the outstanding amount would be charged.
3. If the defaulter fails to repay such amount along with the interest there on in the manner decided by the Government of Karnataka, his/her surety who has executed bond, shall be liable to pay the entire amount, failing which the Deputy Commissioner of the concerned district shall realize the amount as arrears of land revenue.

X. FURNISHING OF FALSE INFORMATION:-

If any candidate furnished any false information/document and if established as false, he/she shall be debarred from the financial assistance and if he/she has availed of it or is availing, an action will be initiated for recovery of the amount paid with 15% compound interest thereon. Criminal procedure will be initiated against such candidates as per law.

## XI. LITIGATION:-

Any litigation on matters arising out of this scheme in India will be subject to sole jurisdiction of the courts situated in Bengaluru. The litigations arising abroad will be dealt appropriately by the Government.

(R.BHASKAR)
Under Secretary to Government-2
Backward Classes Welfare Department.

154

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಸೌಲಭ್ಯವನ್ನು ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ನೀಡುವ ಬಗ್ಗೆ.

ಓದಲಾಗಿದೆ:– 1. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 529 ಬಿಎಂಎಸ್ 2015, ದಿನಾಂಕ:11.06.2015.
2. 2017–18ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ:210.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಬಿಸಿಡಬ್ಲ್ಯೂಡಿ–16015/2/2017–ಬಿಸಿಡಬ್ಲ್ಯೂಡಿ – ಟ್ರೈನಿಂಗ್–ಬಿಸಿಡಬ್ಲ್ಯೂಡಿ, ದಿನಾಂಕ:03.04.2017.

******

ಪ್ರಸ್ತಾವನೆ:–

ಮೇಲೆ ಓದಲಾದ(1)ರಲ್ಲಿ 2015–16ನೇ ಸಾಲಿನಿಂದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಚಿಸುವ ಅರ್ಹ ವಿದ್ಯಾರ್ಥಿಗಳಿಗೆ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನವನ್ನು ಮಂಜೂರು ಮಾಡಲು ಅನುಮೋದನೆ ನೀಡಿ ಆದೇಶಿಸಲಾಗಿದೆ.

2017–18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:210ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು **"100 ವಿದ್ಯಾರ್ಥಿಗಳಿಗೆ ವಿದೇಶಿ ವ್ಯಾಸಂಗ ವೇತನವನ್ನು ಮಂಜೂರು ಮಾಡಲಾಗುವುದು"** ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ (3)ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿ.ಹೆಚ್.ಡಿ ಮಾಡುವ ಹಿಂದುಳಿದ ವರ್ಗಗಳ 100 ವಿದ್ಯಾರ್ಥಿಗಳಿಗೆ 2017–18ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ:2225–03–277–2–37 (ಯೋಜನೆ) ಯಡಿ ರೂ.10.00 ಕೋಟಿಗಳನ್ನು ಮೀಸಲಿರಿಸಿ ನಿಗದಿಪಡಿಸಲಾಗಿದೆಂದು ಹಾಗೂ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ ಎಂದು ತಿಳಿಸುತ್ತಾ, ಈಗಾಗಲೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವ 6 ಕೋರ್ಸ್‌ಗಳೊಂದಿಗೆ ಹೆಚ್ಚುವರಿಯಾಗಿ 16 ಇತರೆ ಕೋರ್ಸ್‌ಗಳಿಗೆ ಅನುಮತಿ ನೀಡುವಂತೆ ಹಾಗೂ ಆದೇಶ ಹೊರಡಿಸಿರುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 361 ಬಿಎಂಎಸ್ 2017, ಬೆಂಗಳೂರು
ದಿನಾಂಕ: 10–05–2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2017–18ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ:210ನ್ನು ಅನುಷ್ಠಾನಗೊಳಿಸಲು ಆಯ್ಕೆ ಸಮಿತಿಯಿಂದ ಆಯ್ಕೆಯಾದ ಅರ್ಹ 100 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ **ಅನುಬಂಧದಲ್ಲಿ ತಿಳಿಸಿರುವ** ಕೋರ್ಸುಗಳ ಪೈಕಿ ಯಾವುದಾದರೂ ಒಂದು ಕೋರ್ಸ್‌ನ್ನು ವಿದೇಶದಲ್ಲಿ ಅಧ್ಯಯನ ಮಾಡುವ ಸಲುವಾಗಿ **"ವಿದೇಶಿ ವ್ಯಾಸಂಗ ವೇತನ"** ವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

...2

ಷರತ್ತುಗಳು:-

1. ಈ ಕಾರ್ಯಕ್ರಮವನ್ನು ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 529 ಬಿಎಂಎಸ್ 2015, ದಿನಾಂಕ:11.06.2015 ಹೊರಡಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸತಕ್ಕದು.
2. ಈ ಕಾರ್ಯಕ್ರಮವನ್ನು ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ:2225-03-277-2-37ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.
3. ಈ ಯೋಜನೆಯನ್ನು ನಿಯಮಾನುಸಾರ ಮತ್ತು ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸತಕ್ಕದ್ದು.
4. ಈ ಕೆಳಕಂಡ ಪ್ರತಿಷ್ಠಿತ ಸಂಸ್ಥೆಗಳ ಮುಖಾಂತರ ವಿದೇಶಿ ವ್ಯಾಸಂಗಕ್ಕೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಮಾಡತಕ್ಕದ್ದು. ಮತ್ತು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅದ್ಯತೆಯನ್ನು ನೀಡುವುದು.

    ಅ] G-MAT ಇ] World University Ranking

    ಆ] TOEFL. ಈ] Best Global University Ranking

    ಉ]GRB

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 213 ವೆಚ್ಚ-3/2016, ದಿನಾಂಕ:28.04.2017ರ ಸಹಮತಿಯನ್ವಯ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 35 ಐಎಂಎಂ 2017, ದಿನಾಂಕ:24.04.2017ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2), ಬೆಂಗಳೂರು
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ವೆಚ್ಚ-3), ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ.
5. ಆಂತರಿಕ ಆರ್ಥಿಕ ಸಲಹೆಗಾರರು, ವಿಕಾಸಸೌಧ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು. (ಆಯುಕ್ತರ ಹಿಂವಕ, ಇವರ ಮುಖಾಂತರ)
7. ರಾಜ್ಯ ಹುಜೂರು ಖಜಾನೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸ ಸೌಧ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

..3

## ANNEXTURE TO GOVERNMENT ORDER NO BCW 361 BMS 2017 DATED: 10.05.2017

Courses/Topics for the scheme of "D.Devaraja Urs Videshi Vyasanga Vethana" for the candidates sponsored by Backward Classes Welfare Department,Government of Karnataka.

THE SCHEME:

The Scheme provides financial assistance to the eligible Backward Class candidates for pursuing Masters level courses and Ph.D/Research at abroad in the following specified field of study.

1. Engineering & Technology.
2. Management & Commerce.
3. Sciences & Technology.
4. Agriculture & Allied Sciences/Technology.
5. Medicine.
6. Humanities & Social Sciences.
7. Any other.

The following courses have been included for this year.

| Sl. No | Name of the course |
|---|---|
| 1 | Petroleum Technology |
| 2 | Automation Robotics Including Artificial Intelligence. Mechatronics and Manufacturing Technology |
| 3 | Laser Technology |
| 4 | Paper Technology |
| 5 | Nuclear Engineering |
| 6 | Biotechnology and Genetics Engineering |
| 7 | Art Restoration Technology |
| 8 | Graphic Engineering |
| 9 | Aircraft/Space Engineering |
| 10 | Ceramics and Glasses Technology |
| 11 | Naval Architecture/Offshore Structures/Architecture in General |
| 12 | Satellite or remote Sensing |
| 13 | Optometry |
| 14 | Low Temperature Thermal Dynamics |
| 15 | Imaging System Technology |
| 16 | Any other |

(R.BHASKAR)
Under Secretary to Govt.,
Backward Classes Welfare Department.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಸೌಲಭ್ಯವನ್ನು ನೀಡುವ ಕುರಿತು.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 529 ಬಿಎಂಎಸ್ 2015, ದಿನಾಂಕ:11.06.2015.
2. ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 361 ಬಿಎಂಎಸ್ 2017, ದಿನಾಂಕ:10.05.2017.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಸಲ್ಲಿಸಿದ ಪ್ರಸ್ತಾವನೆ ದಿನಾಂಕ:28.06.2018.

******

ಪ್ರಸ್ತಾವನೆ:-

ಮೇಲೆ ಓದಲಾದ ಸರ್ಕಾರದ ಆದೇಶ (1) ಮತ್ತು (2)ರಲ್ಲಿ 2015-16 ಮತ್ತು 2017-18ನೇ ಸಾಲಿನಿಂದ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಛಿಸುವ ಅರ್ಹ ವಿದ್ಯಾರ್ಥಿಗಳಿಗೆ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನವನ್ನು ಮಂಜೂರು ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ(3)ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆ ದಿನಾಂಕ:10.07.2018ರಲ್ಲಿ ದಿನಾಂಕ:19.06.2018ರಲ್ಲಿ ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿದೇಶಿ ವ್ಯಾಸಂಗ ವೇತನ ಕಾರ್ಯಕ್ರಮದಲ್ಲಿ ಅಗತ್ಯ ಬದಲಾವಣೆ ಕುರಿತಂತೆ ಚರ್ಚಿಸಿ ತೀರ್ಮಾನ ಕೈಗೊಂಡಿದ್ದು, ಅದರಂತೆ ತಿದ್ದುಪಡಿ ಮಾಡಿ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 869 ಬಿಎಂಎಸ್ 2018, ಬೆಂಗಳೂರು**
**ದಿನಾಂಕ:31-08-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಈ ಆದೇಶದ ಅನುಬಂಧದಲ್ಲಿನ ಮಾರ್ಗಸೂಚಿಗಳನ್ವಯ ಕೆಲವೊಂದು ಅಂಶಗಳನ್ನು ತಿದ್ದುಪಡಿ ಮಾಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಲಾಗಿದೆ.

ಷರತ್ತುಗಳು:-

1. ಈ ಕಾರ್ಯಕ್ರಮವನ್ನು ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 529 ಬಿಎಂಎಸ್ 2015, ದಿನಾಂಕ:11.06.2015 ಮತ್ತು ಬಿಸಿಡಬ್ಲ್ಯೂ 361 ಬಿಎಂಎಸ್ 2017 ದಿನಾಂಕ:10.05.2017ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.
2. ಈ ಕಾರ್ಯಕ್ರಮವನ್ನು ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ:2225-03-277-2-37ರಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.
3. ಈ ಯೋಜನೆಯನ್ನು ನಿಯಮಾನುಸಾರ ಮತ್ತು ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸತಕ್ಕದ್ದು.

....2

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 02 ಟಿಎಫ್‌ಪಿ 2018, ದಿ:03.04.2018ರಲ್ಲಿ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಗೆ:

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ ಬೆಂಗಳೂರು.
2. ಸರ್ಕಾರಧ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ. ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ.
5. ನಿರ್ದೇಶಕರು, ಪಿ.ಎಂ.ಐ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಖಜನಾಧಿಕಾರಿಗಳು. ರಾಜ್ಯ ಹುಜೂರ್ ಖಜಾನೆ. ಬೆಂಗಳೂರು
7. ಆಂತರಿಕ ಆರ್ಥಿಕ ಸಲಹೆಗಾರರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.

<u>ಪ್ರತಿಯನ್ನು:</u>

1. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
3. ಸರ್ಕಾರದ ಉಪ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

-----

..3

<u>ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯು 869 ಬಿಎಂಎಸ್ 2018, ಬೆಂಗಳೂರು</u>

<u>ದಿನಾಂಕ:31-08-2018</u>

## <u>ಅನುಬಂಧ</u>

1. ದಿನಾಂಕ:11.06.2015 ಮತ್ತು ದಿನಾಂಕ:10.05.2017ರ ಆದೇಶಗಳಲ್ಲಿ ಕೆಲವು ಕೋರ್ಸ್‌ಗಳನ್ನು ವಿವರಿಸಲಾಗಿದ್ದು, ಪ್ರತಿ ವರ್ಷವೂ ಸಹ ಹೊಸ ಕೋರ್ಸ್‌ಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಸೇರಿಕೆಯಾಗುವ ಹಿನ್ನೆಲೆಯಲ್ಲಿ ಕೋರ್ಸ್‌ಗಳನ್ನು ಒಟ್ಟಾರೆಯಾಗಿ ತಾಂತ್ರಿಕ ಮತ್ತು ತಾಂತ್ರಿಕೇತರ ಕೋರ್ಸ್‌ಗಳಾಗಿ ವಿಂಗಡಿಸುವುದು. ಈ ಕುರಿತಂತೆ ಆಯ್ಕೆ ಸಮಿತಿಯು ಕೋರ್ಸ್‌ಗಳನ್ನು ತಾಂತ್ರಿಕ ಮತ್ತು ತಾಂತ್ರಿಕೇತರ ಕೋರ್ಸ್‌ಗಳು ಎಂದು ವಿಂಗಡಿಸುವುದು.
2. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಿದ್ಯಾರ್ಹತೆಯ ಕುರಿತು:
   i. For PhD/Research – Minimum 70% marks or equivalent grade in relevant Master Degree
   ii. For Master's Degree - Minimum 70% marks or equivalent grade in relevant Bachelors Degree
3. <u>ವಯೋಮಿತಿ ಕುರಿತು:</u>
   i. For PhD/Research – Below 27 years as on the last date fixed for application for financial assistance, date of birth as per SSLC marks card
   ii. For Master's Degree – Below 25 years as on the last date fixed for application for financial assistance, date of birth as per SSLC marks card
4. <u>ಆದಾಯ ಮಿತಿ:</u>

   Total income from all sources of the candidate and his/her parents/guardians should not exceed Rs.6.00 lakh per annum.

   The term total family income for this scheme is defined below:

a) The income of the parents should be added to the income of the candidate for calculation of family income even if the candidate is legally separated from his parents by registered documents.

b) In case of the married lady candidate, the income of the parents should not be added to the income of the candidate. In such cases, the income of the candidate along with a income of her husband should be taken into consideration if they are living separately as an independent family. If they are living in joint family, the income of the candidate along with the income of the joint family should be taken into consideration for the calculation of family income.

c) In the case of candidate who is a widow her income alone should be taken into account irrespective of whether or not she lives independently.

5. ಹಾಲಿ ಇರುವ ಆಯ್ಕೆ ಸಮಿತಿಯಲ್ಲಿ ರೀಜನಲ್ ಪಾಸ್‌ಪೋರ್ಟ್ ಕಛೇರಿಯ ಮತ್ತು ಇಮಿಗ್ರೇಷನ್ ಕಛೇರಿಯ ಅಧಿಕಾರಿಗಳನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಿದೆ.

6. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು Top One Thousand Global Universities Ranking ನಲ್ಲಿ ನಮೂದಾಗಿರುವ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರಬೇಕು. Top One Thousand Global Universities Ranking ನ್ನು ಆಯ್ಕೆ ಸಮಿತಿಯು ಅಂತರ್ಜಾಲದಲ್ಲಿ ಪ್ರಕಟವಾಗುವ ವಿಶ್ವಾಸಾರ್ಹ Ranking ಅನ್ನು ಪಡೆದು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿಯೇ ಪ್ರಕಟಿಸಬೇಕು.
7. ಆಯ್ಕೆ ಬಯಸುವ ಅಭ್ಯರ್ಥಿಗಳು ಈ ಕೆಳಕಂಡ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿವರಗಳನ್ನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಲ್ಲಿಸಬೇಕು.

   GMAT
   TOEFL
   GRE
   IELTS
   SAT

8. ಅಭ್ಯರ್ಥಿಯು ಅರ್ಜಿ ಸಲ್ಲಿಸುವ ವಿಶ್ವವಿದ್ಯಾಲಯ/ದೇಶದಲ್ಲಿ ಈ ಮೇಲ್ಕಂಡ ಪರೀಕ್ಷೆಗಳಿಂದ ವಿನಾಯಿತಿ ನೀಡಿದ್ದಲ್ಲಿ ಈ ಕುರಿತಂತೆ ವಿವರಗಳನ್ನೂ ಸಹ ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು ಹಾಗೂ ಅಂತಹ ಅಭ್ಯರ್ಥಿಗಳನ್ನು ಪರಿಗಣಿಸುವಲ್ಲಿ ಆಯ್ಕೆ ಸಮಿತಿಯ ತೀರ್ಮಾನವು ಅಂತಿಮವಾಗಿರುತ್ತದೆ.
9. ಅನಿವಾರ್ಯ ಕಾರಣಗಳಿಂದಾಗಿ ಅಭ್ಯರ್ಥಿಯು ಆಯ್ಕೆ ಸಮಿತಿಯ ಮುಂದೆ ಹಾಜರಾಗಲು ಸಾಧ್ಯವಾಗದಿದ್ದ ಸಂದರ್ಭಗಳಲ್ಲಿ ಅಭ್ಯರ್ಥಿಯ ಪರವಾಗಿ ಅವರ ತಂದೆ, ತಾಯಿ, ಸಹೋದರ, ಸಹೋದರಿ, ಪತಿ/ಪತ್ನಿ ಹಾಜರಾಗಲು ಅವಕಾಶವಿದ್ದು, ಅಭ್ಯರ್ಥಿಗಳ ಪರವಾಗಿ ಇತರೆ ವ್ಯಕ್ತಿಗಳಿಗೆ ಅವಕಾಶವಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಹಾಜರಾತಿಯನ್ನು ಪರಿಗಣಿಸುವಲ್ಲಿ ಆಯ್ಕೆ ಸಮಿತಿಯ ತೀರ್ಮಾನವು ಅಂತಿಮವಾಗಿರುತ್ತದೆ.
10. ಕಾರ್ಯಕ್ರಮದ ಅನುಷ್ಠಾನದ ಸಂದರ್ಭದಲ್ಲಿ ಮೇಲ್ಕಂಡ ಆದೇಶದಲ್ಲಿ ಹೇಳಲಾದ ಅಂಶಗಳನ್ನು ಹೊರತುಪಡಿಸಿ ಹೆಚ್ಚಿನ ಮಾಹಿತಿ/ಸ್ಪಷ್ಟೀಕರಣ ಅವಶ್ಯಕವಿದ್ದಲ್ಲಿ ಆಯ್ಕೆ ಸಮಿತಿಯ ತೀರ್ಮಾನವು ಅಂತಿಮವಾಗಿರುತ್ತದೆ.

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ